# ಶ್ರೀಮಾತೆ: ತಾಯಿ, ಗುರು, ದೇವಿ

**ಸ್ವಾಮಿ ಅಘಹರಾನಂದ**

ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ದೈವೀ ಹಾಗೂ ಮಾನವೀ ನೆಲೆಯ ಸ್ವಭಾವಗಳು ಮಿಲನಗೊಂಡಿದ್ದವು. ಶ್ರೀರಾಮಕೃಷ್ಣರ ಅವತರಣ ಕಾರ್ಯದಲ್ಲಿ ಸಹಾಯಕಿಯಾಗಿ ಧರೆಗಿಳಿದ ಜಗನ್ಮಾತೆ, ತಮ್ಮ ಹತ್ತು ಹಲವು ಬಗೆಯ ವ್ಯಕ್ತಿತ್ವವನ್ನು ವಿವಿಧ ಸಂದರ್ಭಗಳಲ್ಲಿ ವ್ಯಕ್ತಗೊಳಿಸುತ್ತಾರೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

### ಪೀಠಿಕೆ

ನಮ್ಮ ಸ್ಥೂಲನೋಟಕ್ಕೆ ಶ್ರೀಮಾತೆಯವರು ಮೊದಲು ಪ್ರೇಮಮಯಿ ಮಾತೆಯಾಗಿ, ವಾತ್ಸಲ್ಯಧಾರೆ ಹರಿಸುವ ಜನನಿಯಾಗಿ ತೋರಿಬರುತ್ತಾರೆ. ಆ ಪ್ರೇಮದಿಂದ ಆಕರ್ಷಿತರಾಗಿ ಬಳಿ ಸಾರಿದರೆ ಆಗ ನಮ್ಮ ಅರಿವಿಗೆ ಬರುತ್ತದೆ: ಅವರು ಕೇವಲ ಮುದ್ದುಮಾಡುವ ತಾಯಿಯಲ್ಲ, ದಿವ್ಯಜ್ಞಾನ ಸಾರವನ್ನು ಕರುಣಿಸುವ ಶಾರದಾಮಾತೆ, ಗುರುಸ್ವರೂಪಿಣಿ ಎನ್ನುವುದು. ಅನಂತರ, ಅವರ ಅಲೌಕಿಕ ವ್ಯಕ್ತಿತ್ವದ ಪ್ರಭೆಯನ್ನು ಗುರುತಿಸಿದಂತೆ, ಅತಿಮಾನುಷ ಮಹಿಮೆಯನ್ನು ಮನಗಂಡಂತೆ, ಅವರೇ ಸ್ವಯಂ ಮಂತ್ರಸ್ವರೂಪಿಣಿ, ದೇವಿ, ಜಗನ್ಮಾತೆ ಎನ್ನುವುದೂ ನಮಗೆ ಹೊಳೆಯುತ್ತದೆ. ಹೀಗೆ, ಶ್ರೀಮಾತೆಯವರನ್ನು ನಾವು ಮೂರು ವಿಭಿನ್ನ ಪಾತ್ರಗಳಲ್ಲಿ ಮಾತೆಯಂತೆ, ಗುರುವಿನಂತೆ ಮತ್ತು ದೇವಿಯಂತೆ ಕಲ್ಪಿಸಿ, ಪರಿಭಾವಿಸಬಹುದು. ಇದಕ್ಕೆ ನಿದರ್ಶನವೆಂಬಂತೆ ಕೆಲವೊಂದು ಘಟನೆಗಳನ್ನು ನೋಡೋಣ.

### ತಾಯಿಯಾಗಿ ಶ್ರೀಮಾತೆ ಶಾರದಾದೇವಿಯವರು

'ದೇವೀ ಮಾಹಾತ್ಮ್ಯ'ದಲ್ಲಿ ಹೇಳುವಂತೆ, 'ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ' – ಪ್ರಾಣಿಗಳಿಂದ ಹಿಡಿದು ಮನುಷ್ಯನವರೆಗಿನ ಸಕಲ ಜೀವಿಗಳಲ್ಲಿ ತಾಯಿಯಾಗಿ ವ್ಯಕ್ತವಾಗಿರುವವಳು ಸಾಕ್ಷಾತ್ ಭಗವತಿಯೇ ಅಲ್ಲದೆ ಮತ್ತಾರೂ ಅಲ್ಲ. ಶ್ರೀಮಾತೆ ಶಾರದಾದೇವಿಯವರ ಅಂತರಂಗದಿಂದ ಸರ್ವಜೀವಿಗಳ ಮೇಲೆ ವಾತ್ಸಲ್ಯ ಹೇಗೆ ಹೊರಹೊಮ್ಮುತ್ತಿತ್ತು ಎಂಬುದನ್ನು ತೋರಿಸುವ ಅಸಂಖ್ಯಾತ ಪ್ರಸಂಗಗಳನ್ನು ನೋಡುತ್ತಿದ್ದಂತೆ, ನಮ್ಮ ಹೃದಯದಲ್ಲಿ ಅವರ ವಿಶ್ವಮಾತೃತ್ವದ ಅರ್ಥ ತಾನಾಗಿಯೇ ಸ್ಫುರಿಸುತ್ತದೆ.

ಒಮ್ಮೆ ಒಬ್ಬಳು ಭಕ್ತೆ ತನ್ನ ಮಗುವನ್ನು ಅಲ್ಲೇ ಹಾಸಿದ್ದ ಶ್ರೀಮಾತೆಯವರ ಕಂಬಳಿಯ ಮೇಲೆ ಮಲಗಿಸಿ ಮಾತುಕತೆಯಾಡುತ್ತಿದ್ದಳು. ಮಗು ಆ ಕಂಬಳಿಯ ಮೇಲೇ ಹೇಸಿಗೆ ಮಾಡಿಬಿಟ್ಟಿತು. ಮಗುವಿನ ತಾಯಿ ಸಹಜವಾಗಿಯೇ ಕಸಿವಿಸಿಗೊಂಡು ಕಂಬಳಿಯನ್ನು ತೊಳೆಯಲು ಮುಂದಾದಳು. ಸಾಮಾನ್ಯವಾಗಿ ಇಂಥ ಸಂದರ್ಭದಲ್ಲಿ ಯಾರೂ ಮಗುವಿನ ತಾಯಿಯನ್ನು ತಡೆಯಹೋಗುವುದಿಲ್ಲ. ಏಕೆಂದರೆ ಅದು ತಾಯಿ ಮಾಡಬೇಕಾದ ಕೆಲಸವೇ ಎನ್ನುವುದು ಸಾರ್ವತ್ರಿಕ ನಿಯಮ. ಆದರೆ



ಶ್ರೀಮಾತೆಯವರು ಅವಳ ಕೈಯಿಂದ ಕಂಬಳಿಯನ್ನು ಕಿತ್ತುಕೊಂಡು ತಾವೇ ತೊಳೆದುಬಿಟ್ಟರು. ''ಅಮ್ಮ, ಅದನ್ನು ನೀವೇಕೆ ತೊಳೆಯಬೇಕು?'' ಎಂದು ಆ ಭಕ್ತೆ ಎಷ್ಟೋ ಆಕ್ಷೇಪಿಸಿದಳು. ಶ್ರೀಮಾತೆಯವರು ತಕ್ಷಣ ಚುಟುಕಾಗಿ ಹಾಗೂ ವಾತ್ಸಲ್ಯ ತುಂಬಿ ಹೇಳಿದರು, ''ಯಾಕೆ ತೊಳೆಯಬಾರದು? ಈ ಮಗುವೇನು ನನಗೆ ಬೇರೆಯೆ?'' ಇಲ್ಲಿ ಶ್ರೀಮಾತೆಯವರು ಪರರ ಮಕ್ಕಳನ್ನೂ ತಮ್ಮ ಸ್ವಂತ ಮಕ್ಕಳೆಂದೇ ಹೃತ್ಪೂರ್ವಕವಾಗಿ ಭಾವಿಸಿ ಕಿಂಚಿತ್ತೂ ಅಸಹ್ಯಪಟ್ಟುಕೊಳ್ಳದೆ ಕಂಬಳಿಯನ್ನು ತೊಳೆಯಲು ಸಿದ್ಧರಾಗಿದ್ದುದನ್ನು ನಾವು ಕಾಣುತ್ತೇವೆ.

ಒಮ್ಮೆ ಒಬ್ಬ ಭಕ್ತ ಶ್ರೀಮಾತೆಯವರಿಗೆ ಒಂದು ಕರೆಯುವ ಹಸುವನ್ನು ಕಾಣಿಕೆಯಾಗಿ ಕೊಟ್ಟ. ಅಲ್ಲದೆ ಅದನ್ನು ನೋಡಿಕೊಳ್ಳಲು ಗೋವಿಂದ ಎಂಬ ಒಬ್ಬ ಅನಾಥ ಹುಡುಗನನ್ನೂ ತಾನೇ ಸಂಬಳ ಕೊಟ್ಟು ವ್ಯವಸ್ಥೆ ಮಾಡಿದ. ಈ ಹುಡುಗನ ನಡವಳಿಕೆ ತುಂಬ ಹಿತವಾಗಿತ್ತು. ಸದಾ ಹಸನ್ಮುಖಿಯಾಗಿರುತ್ತಿದ್ದ. ಒಮ್ಮೆ ಇವನಿಗೆ ಮೈಯೆಲ್ಲ ಕಜ್ಜಿ ಎದ್ದು ತುರಿಕೆ-ಉರಿ ಹತ್ತಿ

ಕೊಂಡಿತು. ಇದೊಂದು ಸಣ್ಣ ವಿಷಯ. ತಾನಾಗಿಯೇ ಹೊರಟು ಹೋಗುತ್ತದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಕೆಲವು ನಾಟಿ ಔಷಧಿಗಳನ್ನು ಹಚ್ಚಿದ ಮೇಲೂ ಅದು ವಾಸಿಯಾಗಲಿಲ್ಲ. ಒಂದು ರಾತ್ರಿ ಇದ್ದಕ್ಕಿದ್ದಂತೆ ಉರಿ ಹೆಚ್ಚಿ ರಾತ್ರಿಯಿಡೀ ನಿದ್ರೆ ಇಲ್ಲ ದಂತಾಯಿತು. ಹುಡುಗ, ಪಾಪ! ಒಂದೇ ಸಮನೆ ಅಳುತ್ತಿದ್ದ. ಅದನ್ನು ಕೇಳುತ್ತ ಅತ್ತ ಶ್ರೀಮಾತೆಯವರಿಗೂ ನಿದ್ರೆಯಿಲ್ಲ. ರಾತ್ರಿಯೆಲ್ಲ ಮರುಕದಿಂದ ತೊಳಲಾಡುತ್ತಿದ್ದರು. ಮರುದಿನ ಬೆಳಕು ಹರಿಯುತ್ತಿದ್ದಂತೆ. ಅವರೇ ಅವನಿಗೆ ಔಷಧಿ ತಯಾರಿಸಲು ಸಿದ್ಧರಾದರು. ಒಂದಿಷ್ಟು ಬೇವಿನ ಸೊಪ್ಪಿನೊಂದಿಗೆ ಅರಸಿನವನ್ನು ಸೇರಿಸಿ ನುಣ್ಣಗೆ ಅರೆದು ಸಿದ್ಧಮಾಡಿಟ್ಟುಕೊಂಡು ಆ ಹುಡುಗನನ್ನು ಕರೆದರು. ಆ ರಸವನ್ನು ಸ್ವಲ್ಪ ಸ್ವಲ್ಪವಾಗಿ ಅವನ ಕೈಗೆ ಕೊಡುತ್ತ ಅದನ್ನು ಕಜ್ಜಿಯ ಮೇಲೆ ಹೇಗೆ ಲೇಪಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟರು. ಶ್ರೀಮಾತೆಯವರು ತೋರುತ್ತಿದ್ದ ಪ್ರೀತಿ-ಕರುಣೆಗಳನ್ನು ಕಂಡು ಆ ಹುಡುಗ ಗೋವಿಂದನ ಮುಖ ಕೃತಜ್ಞತೆಯಿಂದ ಬೆಳಗುತ್ತಿತ್ತು. ತಾಯಿಯಿಲ್ಲದ ಅವನು, ಸಂಕೋಚಪಡದೆ ಶ್ರೀಮಾತೆಯವರೆದುರು ನಿಂತು, ಅವರು ಹೇಳಿಕೊಟ್ಟಂತೆ ಔಷಧಿಯನ್ನು ಹಚ್ಚಿಕೊಂಡ. ಶ್ರೀಮಾತೆಯವರು ಮಾಡಿದ ಚಿಕಿತ್ಸೆಯಿಂದ ಹುಡುಗನ ಕಾಯಿಲೆ ಬೇಗನೆ ವಾಸಿಯಾಯಿತು.

ಒಂದು ದಿನ ಶ್ರೀಮಾತೆಯವರ ಮನೆಯಲ್ಲಿದ್ದ ಮುಗ್ಧ ಕರು, ಅದೇಕೋ ಒಂದೇ ಸಮನೆ ಕೂಗಿಕೊಳ್ಳಲು ಶುರು ಮಾಡಿತು. ಅದು ಕೂಗುತ್ತಿದ್ದ ಕ್ರಮವನ್ನು ನೋಡಿ, ಎಲ್ಲರೂ ಅದಕ್ಕೆಲ್ಲೋ ಹೊಟ್ಟೆ ನೋವಾಗಿರಬೇಕು ಎಂದು ಊಹಿಸಿದರು. ಈಗ ಇದಕ್ಕೇನು ಮಾಡಬೇಕು ಎಂದು ಗೊತ್ತಾಗದೆ, ಎಲ್ಲರೂ ತಮತಮಗೆ ತಿಳಿದಂತೆ ಔಷಧಿ ಮಾಡಿದರು. ಅವರವರಿಗೆ ತಿಳಿದಿದ್ದ ಅರೆವೈದ್ಯವನ್ನು ಪ್ರಯೋಗ ಮಾಡಿ ನೋಡುವುದಕ್ಕೆ ಈ ಕರು ಎರವಾಯಿತೇ ಹೊರತು ಅದರ ಅರಚಾಟ ಮಾತ್ರ ನಿಲ್ಲಲಿಲ್ಲ. ಅದನ್ನು ಕೇಳಿ, ಈ ಹೊತ್ತಿಗೆ ಶ್ರೀಮಾತೆಯವರೂ ಅಲ್ಲಿಗೆ ಬಂದರು. ಬಂದವರು, ಅದು ತನ್ನ ಸ್ವಂತ ಮಗುವೋ ಎಂಬಂತೆ ಅದನ್ನು ತಬ್ಬಿಕೊಂಡು ಅದರ ಹೊಟ್ಟೆಯನ್ನು ತಿಕ್ಕುತ್ತ, ಮೆಲ್ಲನೆ ತಟ್ಟುತ್ತ, ವಾತ್ಸಲ್ಯ ತೋರಿದರು. ಆಶ್ಚರ್ಯ! ಸ್ವಲ್ಪ ಹೊತ್ತಿನಲ್ಲೇ ಅದರ ನೋವು ಅಡಗಿತು, ಕೂಗು ನಿಂತಿತು. ಆ ಕರುವಿಗೆ ತನ್ಮೂಲಕ ಶ್ರೀಮಾತೆಯವರ ವಾತ್ಸಲ್ಯಾಮೃತಪಾನವಾಯಿತು.

ಶ್ರೀಮಾತೆಯವರ ಮಾತೃಭಾವದ ಮತ್ತೊಂದು ಅಂಶವೆಂದರೆ ಅವರು ತಮ್ಮ ಎಲ್ಲ ಮಕ್ಕಳ ವಿಷಯದಲ್ಲೂ ಸಮಾನವಾದ ವಾತ್ಸಲ್ಯ-ಪ್ರೇಮ ತೋರುತ್ತಿದ್ದುದು. ಯಾವೊಬ್ಬ ಮನುಷ್ಯನೂ ನೂರಕ್ಕೆ ನೂರು ಪಾಲು ದೋಷರಹಿತನಲ್ಲ ಎಂಬ ಅರಿವು ಅವರಿಗಿತ್ತು. ಒಮ್ಮೆ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರೊಬ್ಬರು ಒಬ್ಬ ಭಕ್ತನ ಶೀಲಭ್ರಷ್ಟತೆಯನ್ನು ಕಂಡು ಜುಗುಪ್ಸೆಗೊಂಡು, ''ಅಮ್ಮಾ, ನೀವು ಆತನನ್ನು ನಿಮ್ಮ ಬಳಿಗೆ ಬರಗೊಡಬಾರದು'' ಎಂದು ಬೇಡಿಕೊಂಡರು. ಆಗ ಶ್ರೀಮಾತೆಯವರು ಗಂಭೀರವಾಗಿ ಉತ್ತರಿಸಿದರು: ''ಏನಪ್ಪ, ನನ್ನ ಮಗು ಕೆಸರಿನಲ್ಲಾಡಿ ಮೈಕೊಳೆ ಮಾಡಿಕೊಂಡರೆ, ಅದರ ಮೈತೊಳೆದು ಮಡಿಲಲ್ಲೆತ್ತಿಕೊಳ್ಳಬೇಕಾದವಳು, ತಾಯಿಯಾದ ನಾನಲ್ಲದೆ ಇನ್ಯಾರು?'' ಶೀಲಭ್ರಷ್ಟತೆ ಎಂಬುದು ವ್ಯಕ್ತಿತ್ವಕ್ಕೆ ಅಂಟಿಕೊಳ್ಳುವ ಕೊಳೆ ಮಾತ್ರವೇ; ತನ್ನ ಸಂತಾನದ ವಿಷಯದಲ್ಲಿ ಶ್ರೀಮಾತೆಯಾಗಿ ಅವತರಿಸಿದ ಕರುಣಾಮಯಿಯಾದ ಜಗನ್ಮಾತೆ ಆ ಕೊಳೆಯನ್ನು ತೊಳೆದು ತನ್ನ ಮಡಿಲಲ್ಲೆತ್ತಿಕೊಳ್ಳಲು ಸದಾ ಸಿದ್ಧಳಾಗಿರುತ್ತಾಳೆ. ಈ ಕುರಿತಾಗಿ ಕೆಲವೊಂದು ಪ್ರಸಂಗಗಳನ್ನು ನೋಡೋಣ.

ಜಯರಾಂಬಾಟಿಯ ನೆರೆಗ್ರಾಮದಲ್ಲಿ ಶ್ರೀಮಂತ ಮನೆತನಕ್ಕೆ ಸೇರಿದ ಒಬ್ಬ ವಿದ್ಯಾವಂತ ಯುವಕನಿದ್ದ. ಅವನಿಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವ ಭಾಗ್ಯ ಲಭಿಸಿತ್ತು. ಅವನು ಆಗಾಗ ಅವರ ಬಳಿಗೆ ಬಂದುಹೋಗುತ್ತಿದ್ದ. ಅವನ ಸಹಾಯ, ಪ್ರೋತ್ಸಾಹಗಳಿಂದಲೇ ಆತನ ಗ್ರಾಮದಲ್ಲಿ ಒಂದು ಸಣ್ಣ ಆಶ್ರಮವೂ ಸ್ಥಾಪನೆಯಾಗಿತ್ತು. ಹೀಗೆ ಆ ಯುವಕ ಸತ್ಕಾರ್ಯದಲ್ಲೇನೋ ನಿರತನಾಗಿದ್ದ. ಆದರೆ ದುರದೃಷ್ಟವಶಾತ್ ಆತ ತನ್ನ ಹತ್ತಿರದ ಸಂಬಂಧಿಕಳಾದ ಒಬ್ಬಳು ಯುವತಿಯ ಮೋಹಕ್ಕೆ ಸಿಲುಕಿದ. ಆಕೆಯೋ ಬಾಲವಿಧವೆ, ಇಬ್ಬರ ನಡುವಿನ ಅನೈತಿಕ ಸಂಬಂಧ ಬೇಗನೆ ಬಯಲಾಯಿತು. ಸರಿ; ಆತನ ಸಂಬಂಧವಾಗಿ ಅಪವಾದದ ಮಾತು ಹರಡಿತು; ಜಯರಾಂಬಾಟಿಗೂ ತಲುಪಿತು. ಈ ಸುದ್ದಿಯನ್ನು ಕೇಳಿ ಭಕ್ತರೆಲ್ಲ ಕೋಪೋದ್ರಿಕ್ತರಾಗಿ ಇನ್ನು ಮೇಲೆ ಆತನನ್ನು ತಮ್ಮ ಬಳಿಗೆ ಬರಗೊಡಬಾರದು ಎಂದು ಶ್ರೀಮಾತೆಯವರನ್ನು ಆಗ್ರಹಪಡಿಸಿದರು. ತಮ್ಮ ಶಿಷ್ಯನ ಕಥೆ ಕೇಳಿ ಶ್ರೀಮಾತೆಯವರು ತುಂಬಾ ದುಃಖ ವ್ಯಕ್ತಪಡಿಸಿದರು. ಆದರೆ ಅವರು ಅಷ್ಟೇ ದೃಢವಾಗಿ ಭಕ್ತರ ಹತ್ತಿರ ಹೇಳಿಬಿಟ್ಟರು: ''ನಾನು ಅವನ ತಾಯಿಯಾಗಿ ಇಲ್ಲಿಗೆ ಬರಬೇಡ ಅಂತ ಹೇಗೆ ಹೇಳಲಿ? ಅಂಥ ಮಾತು ನನ್ನ ಬಾಯಿಂದ ಹೊರಬೀಳದು.'' ಅವರ ಕ್ಷಮಾಶೀಲತೆಯನ್ನೂ ದೃಢತೆಯನ್ನೂ ಕಂಡು ಉಳಿದವರು ಸುಮ್ಮನಾಗಲೇಬೇಕಾಯಿತು. ಆ ಯುವಕ ಎಂದಿನಂತೆಯೇ ಅವರ ಬಳಿಗೆ ಬಂದು ಹೋಗುತ್ತಿದ್ದ. ಬಹುಶಃ ಅವನಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪವಾಗಿರಬೇಕು. ಆದ್ದರಿಂದ ಶ್ರೀಮಾತೆಯವರು ಅವಿನಿಗೇನೂ ಹೇಳಹೋಗಲಿಲ್ಲ. ಒಂದು ದಿನ ಅವನು ಆ ಯುವತಿಯನ್ನೂ ಕರೆತಂದ. ಆಗ ಶ್ರೀಮಾತೆಯವರು, ಇನ್ನು ಮುಂದಾದರೂ ಎಚ್ಚರದಿಂದಿರುವಂತೆ ಅವರಿಬ್ಬರಿಗೂ ಬುದ್ಧಿ ಹೇಳಿದರು. ಆ ಯುವತಿಯ ಮೇಲೂ ಅವರ ವಾತ್ಸಲ್ಯವೇನೂ ಕಡಿಮೆಯಿದ್ದಂತೆ ತೋರಲಿಲ್ಲ. ತಮ್ಮ ಉಳಿದ ಹೆಣ್ಣುಮಕ್ಕಳನ್ನು ಹೇಗೋ ಅಷ್ಟೇ ಪ್ರೀತ್ಯಾದರಗಳಿಂದ ಅವಳನ್ನೂ ನೋಡಿಕೊಂಡರು.

ಶ್ರೀಮಾತೆಯವರು ಆಗ ಕಲ್ಕತ್ತದ ಬೋಸ್‌ಪಾರಾ ಲೇನಿನ ಮನೆಯಲ್ಲಿ ವಾಸಿಸುತ್ತಿದ್ದರು. ಆಗ ಬೇಲೂರು ಮಠದ ಒಬ್ಬ ಕೆಲಸದವನು ಏನನ್ನೋ ಕದ್ದು ಸಿಕ್ಕಿಬಿದ್ದ. ಇದನ್ನು ತಿಳಿದ ಸ್ವಾಮಿ ವಿವೇಕಾನಂದರು ಕೂಡಲೇ ಅವನನ್ನು ಗೇಟು ದಾಟಿಸಿದರು. ಆದರೆ ಆತ ಕಡುಬಡವ; ಅವನ ಅಲ್ಪ ಸಂಪಾದನೆಯ ಮೇಲೇ

ಅವನ ಸಂಸಾರ ಕುಂಟುತ್ತಿತ್ತು. ಆಗ ಅದಕ್ಕೂ ಅವಕಾಶವಿಲ್ಲದೆ ಬಿದ್ದುಹೋಗುವ ಸ್ಥಿತಿಗೆ ಬಂತು. ಆತ ಶ್ರೀಮಾತೆಯವರ ಬಳಿಗೆ ಓಡಿಬಂದ. ಶ್ರೀಮಾತೆಯವರು ಕರುಣಾಮಯಿ, ಅವರು ಕರುಣೆ ತೋರಿದರೆ ತನ್ನ ಕೆಲಸ ಉಳಿದೀತು ಎಂದು ಯಾರಿಂದಲೋ ಕೇಳಿ ತಿಳಿದಿರಬೇಕು. ಓಡಿಹೋಗಿ ಅವರ ಕಾಲಿಗೆ ಬಿದ್ದು ಕಣ್ಣೀರ್ಗರೆದ. ಶ್ರೀಮಾತೆಯವರು ಅವನ ಬಗ್ಗೆ ಮರುಕ ಪಟ್ಟು, ಆ ದಿನ ತಮ್ಮ ಮನೆಯಲ್ಲೇ ಇರಿಸಿಕೊಂಡು, ಸ್ನಾನಾಹಾರಗಳ ವ್ಯವಸ್ಥೆ ಮಾಡಿಸಿದರು. ಅದೇ ಸಾಯಂಕಾಲ ಸ್ವಾಮಿ ಪ್ರೇಮಾನಂದರು ತಮ್ಮ ದರ್ಶನಕ್ಕಾಗಿ ಬಂದಾಗ, ''ನೋಡಪ್ಪ, ಬಾಬುರಾಮ್, ಈ ಮನುಷ್ಯ ಬಹಳ ಬಡವ. ಇವನು ಕಳ್ಳತನ ಮಾಡಿದ ನಿಜ. ಆದರೆ ಇವನು ಕದಿಯುವುದಕ್ಕೆ ಇವನ ಬಡತನವೇ ಕಾರಣವಲ್ಲವೇನಪ್ಪ? ಇಷ್ಟಕ್ಕೇ ನರೇನ್, ಇವನನ್ನು ಬೈದು ಓಡಿಸಿಬಿಡುವುದೆ? ಪ್ರಪಂಚ ಬಹಳ ಕಷ್ಟವಪ್ಪಾ, ನೀವು ಸಂನ್ಯಾಸಿಗಳು. ನಿಮಗೆ ಆ ಕಷ್ಟವೆಲ್ಲಾ ಗೊತ್ತಾಗುವುದಿಲ್ಲ. ಇವನನ್ನು ಪುನಃ ಕರೆದುಕೊಂಡು ಹೋಗು'' ಎಂದರು. ಪ್ರೇಮಾನಂದರಿಗಾಗ ಪೀಕಲಾಟಕ್ಕಿಟ್ಟುಕೊಂಡಿತು. ತಾವೀಗ ಇವನನ್ನು ವಾಪಸು ಕರೆತಂದರೆ ವಿವೇಕಾನಂದರು ರೇಗುತ್ತಾರೆ ಎಂಬ ಅಂಶವನ್ನು ಶ್ರೀಮಾತೆಯವರಿಗೆ ವಿವರಿಸಲು ನೋಡಿದರು. ಆದರೆ ಅವರು ಅದಕ್ಕೆ ಕಿವಿಗೊಡದೆ ಸ್ವಲ್ಪ ಜೋರಾಗಿಯೇ, ''ನೋಡು, ನಾನು ಹೇಳುತ್ತಿದ್ದೇನೆ, ಕರೆದುಕೊಂಡು ಹೋಗು ಅವನನ್ನು'' ಎಂದುಬಿಟ್ಟರು. ಇನ್ನೇನು ತಾನೆ ಹೇಳಿಯಾರು ಪ್ರೇಮಾನಂದರು? ಅವನನ್ನು ಕರೆದುಕೊಂಡು ಸಂಜೆಗತ್ತಲ ಹೊತ್ತಿಗೆ ಮಠದ ಗೇಟಿನೊಳಗೆ ಮೆಲ್ಲಗೆ ಪ್ರವೇಶಿಸಿದರೆ.. ಅವರೆಂದುಕೊಂಡಂತೆಯೇ ಆಯಿತು. ಸ್ವಾಮಿ ವಿವೇಕಾನಂದರು ಇವರನ್ನು ಕಂಡವರೇ, ''ನೋಡು ಈ ಬಾಬುರಾಮನ ಕೆಲಸವನ್ನು! ಅವನನ್ನು ಮತ್ತೆ ಕರೆದುಕೊಂಡು ಬಂದುಬಿಟ್ಟಿದ್ದಾನೆ'' ಎಂದು ಅಬ್ಬರಿಸಿದರು. ''ಆದರೆ ಇದು ಶ್ರೀಮಾತೆಯವರ ಆಜ್ಞೆ'' ಎಂದು ಸ್ವಾಮಿ ಪ್ರೇಮಾನಂದರು ವಿವರಿಸಿದಾಗ ಜಗದ್ವಿಖ್ಯಾತ ವಿವೇಕಾನಂದರು ಗಪ್‌ಚಿಪ್.

ಶ್ರೀಮಾತೆಯವರ ವಾತ್ಸಲ್ಯವೆನ್ನುವುದು ಜಾತಿ-ಕುಲ, ಗುಣ-ದೋಷ, ಲೌಕಿಕ ಸ್ಥಿತಿಗತಿ ಮೊದಲಾದ ಎಲ್ಲ ಅಂಶಗಳನ್ನೂ ಮೀರಿ ನಿಂತಿತ್ತು. ಜಯರಾಂಬಾಟಿಗೆ ಸಮೀಪದ ಶಿರೋಮಣಿಪುರ ಎಂಬಲ್ಲಿ ಮುಸಲ್ಮಾನರು ಬಹುಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ರೇಶ್ಮೆ ವ್ಯವಸಾಯ ಇವರ ಮುಖ್ಯ ವೃತ್ತಿ. ಇವರು ಸಾಕಷ್ಟು ಅನುಕೂಲವಾಗಿಯೇ ಇದ್ದರು. ಆದರೆ ಮಾರುಕಟ್ಟೆಯಲ್ಲಿ ಪಾಶ್ಚಾತ್ಯರ ಪೈಪೋಟಿ ಹೆಚ್ಚಾಗಿ ಆ ಹಳ್ಳಿಗಳಲ್ಲಿನ ಗೃಹ ಕೈಗಾರಿಕೆ ಸಂಪೂರ್ಣ ಮಣ್ಣುಮುಕ್ಕಿತು. ಈ ಗೃಹಕೈಗಾರಿಕೆಯನ್ನೇ ನೆಚ್ಚಿಕೊಂಡಿದ್ದ ಹಲವಾರು ಕುಟುಂಬಗಳು ದಾರಿದ್ರ್ಯಕ್ಕೆ ಬಲಿಯಾದವು. ಪ್ರಾಮಾಣಿಕ ಜೀವನ ನಡೆಸಲು ಬೇರೆ ಯಾವುದೇ ಮಾರ್ಗ ತೋರದೆ ಆ ಮುಸಲ್ಮಾನರು ಜೀವನೋಪಾಯಕ್ಕಾಗಿ ಕಳ್ಳತನ-ದರೋಡೆಗಳಿಗೆ ಇಳಿದರು. ಇವರಿಗೆಲ್ಲ ರೇಶ್ಮೆ ಡಕಾಯಿತರು ಎಂದೇ ಹೆಸರು ಅಂಟಿಕೊಂಡಿತು. ಜಯರಾಂಬಾಟಿಗೂ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ಜನ ಇವರಿಗೆ ಹೆದರುತ್ತಿದ್ದರು. ಇವರಲ್ಲೂ ಕೆಲವರು ನ್ಯಾಯವಾಗಿ ಬದುಕುವ ಇಚ್ಛೆಯಿದ್ದವರು ಇರಲಿಲ್ಲವೆಂದಲ್ಲ. ಆದರೆ ಮೊದಲೇ ಮುಸಲ್ಮಾನರು; ಸಾಲದ್ದಕ್ಕೆ ಡಕಾಯಿತರೆಂಬ ಕುಖ್ಯಾತಿಗೊಳಗಾದವರು. ಆದ್ದರಿಂದ ಹಿಂದೂಗಳೆಲ್ಲ ಅವರನ್ನು ದೂರದಲ್ಲೇ ಇಟ್ಟಿದ್ದರು. ಈ ಜನರನ್ನು ಶ್ರೀಮಾತೆಯವರು ಹೇಗೆ ನಡೆಸಿಕೊಳ್ಳುತ್ತಿದ್ದರು ಎನ್ನುವುದಕ್ಕೆ ದೃಷ್ಟಾಂತವಾಗಿ ಈ ಕೆಳಗಿನ ಉದಾಹರಣೆಯಿದೆ:

ಒಂದು ದಿನ ಒಬ್ಬ ರೇಶ್ಮೆ ಡಕಾಯಿತ ಕೈಯಲ್ಲೊಂದು ಚಿಪ್ಪು ಬಾಳೆಹಣ್ಣು ಹಿಡಿದು ಶ್ರೀಮಾತೆಯವರ ಬಳಿಗೆ ಬಂದು, ''ಅಮ್ಮಾ, ಶ್ರೀರಾಮಕೃಷ್ಣರಿಗೋಸ್ಕರ ಸ್ವಲ್ಪ ಬಾಳೆಹಣ್ಣುಗಳನ್ನು ತಂದಿದ್ದೇನೆ. ಸ್ವೀಕರಿಸುತ್ತೀರಾ?'' ಎಂದು ಕೇಳಿಕೊಂಡ. ಮೊದಲೇ ಆತ ಮುಸಲ್ಮಾನ, ಸಾಲದ್ದಕ್ಕೆ ಡಕಾಯಿತ. ಅವನೀಗ ತಂದಿರುವ ಬಾಳೆಹಣ್ಣು ಕೂಡ ಕದ್ದದ್ದೋ ಏನೋ, ಯಾರಿಗೆ ಗೊತ್ತು! ಇಂಥ ಪರಿಸ್ಥಿತಿಯಲ್ಲಿ ಯಾರಾದರೂ ಅದನ್ನು ನೈವೇದ್ಯಕ್ಕೆ ಸ್ವೀಕರಿಸಿಯಾರೆ? ಆದರೆ ಶ್ರೀಮಾತೆಯವರು ಮಾತ್ರ ಕಿಂಚಿತ್ತೂ ಅನುಮಾನಿಸದೆ, ''ಓ ಖಂಡಿತವಾಗಿ! ನೀನಿದನ್ನು ಶ್ರೀರಾಮಕೃಷ್ಣರಿಗಾಗಿ ತಂದದ್ದಲ್ಲವೆ? ಅವಶ್ಯವಾಗಿ ಕೊಡಿಲ್ಲಿ'' ಎನ್ನುತ್ತ ಕೈನೀಡಿದರು. ನಿಜಕ್ಕೂ ಅವರ ಮಾತಿನಿಂದ ಆ ಮನುಷ್ಯನಿಗೆ ಎಷ್ಟು ಸಂತೋಷವಾಗಿರಬೇಕು! ಆದರೆ ಅಷ್ಟರಲ್ಲಿ ಪಕ್ಕದ ಹಳ್ಳಿಯಿಂದ ಬಂದಿದ್ದ ಒಬ್ಬಳು ಭಕ್ತೆ ಇದನ್ನು ಕಂಡು ಆಘಾತಗೊಂಡು, ''ಅಮ್ಮಾ! ಇವರೆಲ್ಲ ಕಳ್ಳರು, ನಿಮಗೆ ಗೊತ್ತಿಲ್ಲವೆ? ಇವನು ತಂದದ್ದನ್ನು ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುವುದೆ?'' ಎಂದು ಮಧ್ಯೆ ಬಾಯಿಹಾಕಿದಳು. ಶ್ರೀಮಾತೆಯವರು ಅವಳ ಮಾತಿಗೇನೂ ಬದುಲು ಹೇಳುವ ಗೋಜಿಗೆ ಹೋಗದೆ ಆ ಹಣ್ಣುಗಳನ್ನು ಒಳಗೆ ಇಟ್ಟುಬಂದು, ಆ ಮನುಷ್ಯನಿಗೆ ಒಂದಿಷ್ಟು ಕಡಲೆ ಪುರಿ, ಮಿಠಾಯಿ ಪ್ರಸಾದ ಕೊಟ್ಟು ಕಳುಹಿಸಿದರು. ಅವನು ಹೊರಟು ಹೋದ ಮೇಲೆ ಆ ಭಕ್ತೆಯ ಕಡೆಗೆ ತಿರುಗಿ, ''ನೋಡು, ಯಾರು ಒಳ್ಳೆಯವರು, ಯಾರು ಒಳ್ಳೆಯವರಲ್ಲ ಅನ್ನುವುದು ನನಗೆ ಗೊತ್ತಿದೆ.'' ಎಂದು ಹೇಳಿ ಮತ್ತೆ ಅವಳು ಆ ವಿಷಯದಲ್ಲಿ ಬಾಯಿಹಾಕದಂತೆ ಮಾಡಿದರು. ''ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಆದರೆ ತಪ್ಪಿ ನಡೆದವನನ್ನು ತಿದ್ದಿ ಸರಿ ದಾರಿಯಲ್ಲಿ ನಡೆಸಬಲ್ಲವರು ಎಷ್ಟು ಜನ?'' ಎಂದು ಅವರು ಆಗಾಗ ಹೇಳುತ್ತಿದ್ದರು.

### ಗುರುವಾಗಿ ಶ್ರೀಮಾತೆ ಶಾರದಾದೇವಿಯವರು

ಗುರುವಾಗಿ ಮಂತ್ರದೀಕ್ಷೆ ನೀಡುವ ಮೂಲಕ ಶ್ರೀಮಾತೆಯವರು ಎಂತೆಂತಹ ಕಾರ್ಕೋಟಕ ವಿಷವನ್ನು ಕುಡಿಯಬೇಕಾಯಿತು ಎಂಬುದನ್ನು ನೋಡಿದರೆ ಮೈ ಜುಮ್ಮೆನ್ನುತ್ತದೆ. ಒಮ್ಮೆ ಕಲ್ಕತ್ತದ ಮೂವರು ಭಕ್ತರು ಸ್ವಾಮಿ ಬ್ರಹ್ಮಾನಂದರಿಂದ ಪರಿಚಯ ಪತ್ರ ತೆಗೆದುಕೊಂಡು ಜಯರಾಂಬಾಟಿಗೆ ಬಂದರು. ಆ ಪತ್ರವನ್ನು ಓದಿಸಿ ಕೇಳಿದ ಶ್ರೀಮಾತೆ, ಅವರನ್ನು ಒಳಗೆ ಬರಮಾಡಿಕೊಂಡರು. ಆ ಮೂವರು ಭಕ್ತರ ಅಂತರಂಗದಲ್ಲಿ ತುಂಬಿ

ಕೊಂಡಿದ್ದ ಪಾಪರಾಶಿಯನ್ನು ಶ್ರೀಮಾತೆಯವರು ವೀಕ್ಷಣ ಮಾತ್ರದಿಂದ ಗುರುತಿಸಿದ್ದರು. ಆ ಪಾಪದ ಆಘಾತವನ್ನು ತಡೆದುಕೊಳ್ಳುವ ಶಕ್ತಿ ತಮ್ಮಲ್ಲಿಲ್ಲ ಎಂಬ ಭಯ ಅವರಿಗುಂಟಾಯಿತು. ಆದ್ದರಿಂದ, ಸ್ವಯಂ ಬ್ರಹ್ಮಾನಂದರೇ ಪರಿಚಯಪತ್ರ ಬರೆದುಕೊಟ್ಟಿದ್ದರೂ ಅವರು ಆ ಭಕ್ತರಿಗೆ ಮಂತ್ರದೀಕ್ಷೆ ಕೊಡಲು ನಿರಾಕರಿಸಿ, ಬೇಲೂರು ಮಠಕ್ಕೇ ಹೋಗುವಂತೆ ತಿಳಿಸಿದರು. ಅಂತೆಯೇ ಆ ಭಕ್ತರು ಹಿಂದಿರುಗಲು ಮೊದಲಿಗೆ ಸಿದ್ಧರಾದರು. ಆದರೆ ಪುನಃ ಏಕೋ ಅವರಿಗೆ ಸಮಾಧಾನವಾಗಲಿಲ್ಲ. ಶ್ರೀಮಾತೆಯವರಿಂದಲೇ ಮಂತ್ರದೀಕ್ಷೆಯನ್ನು ಪಡೆಯಬೇಕು ಎಂದು ತೀರ್ಮಾನಿಸಿ ಮತ್ತೊಮ್ಮೆ ಅವರ ಬಳಿಗೆ ಬಂದು ಬಹಳಷ್ಟು ಆಗ್ರಹಪಡಿಸಿದರು. ಆದರೂ ಶ್ರೀಮಾತೆ ಒಪ್ಪಲೇ ಇಲ್ಲ. ಅವರು ವಿಷಾದದಿಂದ ಶ್ರೀರಾಮಕೃಷ್ಣರ ಮುಂದೆ ಕುಳಿತು, ''ಹೇ ಪ್ರಭು, ನಿನ್ನೆ ತಾನೆ ನಾನು ನಿಮ್ಮನ್ನು ಪ್ರಾರ್ಥಿಸಿಕೊಂಡೆ, ದಿನಗಳು ವ್ಯರ್ಥವಾಗಿ ಹೋಗದಿರಲಿ ಅಂತ. ಆದರೆ ಕೊನೆಗೂ ಆ ನನ್ನ ಪ್ರಾರ್ಥನೆಗೆ ನೀವು ಕಳುಹಿಸಿಕೊಟ್ಟದ್ದು ಮಾತ್ರ ಇಂಥವರನ್ನು!'' ಎಂದು ದೂರಿದರು. ಕೊನೆಗೆ ಬಹಳ ಹೊತ್ತಿನ ಮೇಲೆ, ಹಾಗೂ ಹೀಗೂ ಆಲೋಚನೆ ಮಾಡಿ ಮಂತ್ರದೀಕ್ಷೆ ಕೊಡಲು ಸಮ್ಮತಿಸಿದರು. ಶ್ರೀರಾಮಕೃಷ್ಣರಿಗೆ ಕೈಮುಗಿದು ''ಆಗಲಿ, ಓ ಠಾಕೂರ್, ಈ ಶರೀರ ಇರುವವರೆಗೂ ನಿಮ್ಮ ಕೆಲಸ ಮಾಡುತ್ತ ಹೋಗುತ್ತೇನೆ'' ಎಂದರು. ಅಂತೂ ಆ ಭಕ್ತರಿಗೆ ಮಂತ್ರದೀಕ್ಷೆ ಸಿಕ್ಕಿತು. ಕೆಲವು ದಿನಗಳು ಕಳೆದವು. ಬೇಲೂರು ಮಠದ ಜಗುಲಿಯಲ್ಲಿ ಒಂದು ದಿನ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಪ್ರೇಮಾನಂದರು ಹಾಗೂ ಸ್ವಾಮಿ ಶಿವಾನಂದರು ಗಂಗೆಗೆ ಇದಿರಾಗಿ ಕುಳಿತಿದ್ದರು. ಆಗ, ಆ ಮಂತ್ರದೀಕ್ಷೆಯ ಪ್ರಸಂಗವನ್ನೆಲ್ಲ ವೀಕ್ಷಿಸಿದ್ದ ಆಶ್ರಮವಾಸಿಗಳೊಬ್ಬರು ಸ್ವಾಮಿಗಳಿಗೆ ಎಲ್ಲವನ್ನೂ ವಿವರಿಸಿ ಹೇಳಿದರು. ಅದನ್ನೆಲ್ಲ ಕೇಳಿ ಸ್ವಾಮಿ ಬ್ರಹ್ಮಾನಂದರು ಅವಾಕ್ಕಾಗಿ ಬಹಳ ಹೊತ್ತು ಹಾಗೆಯೇ ಕುಳಿತುಬಿಟ್ಟರು. ಸ್ವಾಮಿ ಪ್ರೇಮಾನಂದರು ನಿಟ್ಟುಸಿರು ಬಿಡುತ್ತ ಕೈಜೋಡಿಸಿಕೊಂಡು ಉದ್ಗರಿಸಿದರು: ''ಕೃಪೆ! ಕೃಪೆ! ಇಂತಹ ಅಪಾರ ಕೃಪೆಯಿಂದಾಗಿಯೇ ಶ್ರೀಮಾತೆ ನಮ್ಮನ್ನು ರಕ್ಷಿಸಿಕೊಂಡು ಬರುತ್ತಿದ್ದಾರೆ. ಅವರು ಈಗ ಕುಡಿದ ವಿಷದ ವರ್ಣನೆಯನ್ನು ಮಾಡುವುದಕ್ಕೆ ಮಾತಿನಿಂದ ಸಾಧ್ಯವಿಲ್ಲ. ನಾವೇನಾದರೂ ಅವರಂತೆ ಮಾಡಿದ್ದರೆ ಸುಟ್ಟು ಭಸ್ಮವಾಗಿ ಹೋಗುತ್ತಿದ್ದೆವು!''

ಶ್ರೀಮಾತೆಯವರು ಶರಣಾದವರ ಲೋಪದೋಷಗಳನ್ನು ಕಾಣುತ್ತ, ಸ್ವ-ಇಚ್ಛೆಯಿಂದ ಅವರ ಪಾಪಸ್ವೀಕಾರ ಮಾಡಿ ಯಾತನೆಯನ್ನು ಅನುಭವಿಸುತ್ತಿದ್ದರಾದರೂ, ಆ ಪಾಪಿ-ತಾಪಿಗಳ ವಿಷಯದಲ್ಲಿ ಅವರೆಂದೂ ಕಠೋರರಾಗಲಿಲ್ಲ; ಸದಾ ಅವರ ಮೇಲೆ ಕೃಪಾದೃಷ್ಟಿಯನ್ನೇ ಇಟ್ಟಿದ್ದರು. ಒಮ್ಮೆ ಒಬ್ಬಳು ಹೆಂಗಸು ಆಕೆ ಮರ್ಯಾದಸ್ಥ ಮನೆತನದವಳೇ; ಏನೋ ದೌರ್ಬಲ್ಯದ ಗಳಿಗೆಯಲ್ಲಿ ಕೆಟ್ಟ ದಾರಿ ಹಿಡಿದಿದ್ದಳು. ಆದರೆ ಆಮೇಲೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪಪಟ್ಟಳು. ಹೀಗಿರುವಾಗ ಒಮ್ಮೆ ಅವಳಿಗೆ ಅದೃಷ್ಟವಶಾತ್ ಶ್ರೀಮಾತೆಯವರ ದರ್ಶನ ಮಾಡುವ ಅವಕಾಶ ಸಿಕ್ಕಿ, ಅವರ ಬಳಿಗೆ ಬಂದಳು. ಆದರೆ ತನ್ನ ಅಪರಾಧದ ನೆನಪಿನಿಂದ ಅವಳ ಮೈಯೆಲ್ಲ ಕಂಪಿಸುತ್ತಿತ್ತು. ಶ್ರೀಮಾತೆಯವರ ಕೋಣೆಯ ಒಳಗೆ ಬರುವಷ್ಟು ಧೈರ್ಯವಾಗಲಿಲ್ಲ. ಬಾಗಿಲಲ್ಲೇ ನಿಂತು ದುಃಖ ತುಂಬಿದ ದನಿಯಲ್ಲಿ, ''ಅಮ್ಮ, ನನ್ನ ಗತಿ ಏನು? ನಾನು ನಿಮ್ಮ ಈ ಪವಿತ್ರ ಮಂದಿರದೊಳಗೆ ಕಾಲಿಡುವುದಕ್ಕೇ ಅಯೋಗ್ಯಳು'' ಎಂದಳು. ತಕ್ಷಣವೇ ಶ್ರೀಮಾತೆ ಎದ್ದು ಅವಳ ಬಳಿಗೆ ಬಂದು, ತಮ್ಮ ಪರಮಪವಿತ್ರ ಕೈಗಳಿಂದ ಅವಳ ಕೊರಳನ್ನು ಬಳಸಿ ಪ್ರೇಮದಿಂದ, ''ಬಾ ಮಗಳೆ, ಒಳಗೆ ಬಾ. ಯಾವುದು ಪಾಪ ಅಂತ ನಿನಗೀಗ ಅರಿವಾಗಿದೆ, ಪಶ್ಚಾತ್ತಾಪವಾಗಿದೆ. ಬಾ ನಿನಗೆ ಮಂತ್ರದೀಕ್ಷೆ ಕೊಡುತ್ತೇನೆ. ನಿನ್ನೆಲ್ಲ ಭಾರವನ್ನು ಶ್ರೀರಾಮಕೃಷ್ಣರ ಪಾದಗಳಲ್ಲಿ ಸಮರ್ಪಿಸಿ ಭಯವನ್ನು ಕಿತ್ತೊಗೆದುಬಿಡು'' ಎನ್ನುತ್ತ ಒಳಗೆ ಕರೆತಂದು ಸಂತೈಸಿದರು.

ಯಾವುದಾದರೂ ಒಂದು ವಂಶದವರು ಒಂದು ದೇವತೆಯ ಮಂತ್ರವನ್ನು ತಲೆತಲಾಂತರಗಳಿಂದ ಜಪ ಮಾಡಿಕೊಂಡು ಬಂದದ್ದೇ ಆದರೆ, ಅದರ ಪ್ರಭಾವ ಆ ವಂಶದವರ ವ್ಯಕ್ತಿತ್ವದಲ್ಲಿ ಮೂಡಿಬರುತ್ತದೆ. ದಿವ್ಯಜ್ಞಾನಿಗಳಾದವರು ಇದನ್ನು ಸ್ಪಷ್ಟವಾಗಿ ಗುರುತಿಸಬಲ್ಲರು. ಒಮ್ಮೆ ಬಾಗದಾ ಗ್ರಾಮದ ಶಶಿಭೂಷಣ ಮುಖರ್ಜಿ ಎಂಬಾತ ಶ್ರೀಮಾತೆಯವರಲ್ಲಿಗೆ ಬಂದು ತನಗೆ ಶಕ್ತಿ ಮಂತ್ರವನ್ನು ಉಪದೇಶಿಸಬೇಕೆಂದು ಕೇಳಿಕೊಂಡ. ಆದರೆ ಅವರು ಆತನನ್ನು ದಿಟ್ಟಿಸಿ ನೋಡಿ, ''ಏನಪ್ಪ, ನಾನು ನಿನ್ನಲ್ಲಿ ಶ್ರೀರಾಮನನ್ನು ಕಾಣುತ್ತಿದ್ದೇನೆ. ನಿನ್ನ ವಂಶದವರೆಲ್ಲ ರಾಮ ಮಂತ್ರದ ಉಪಾಸನೆ ಮಾಡುತ್ತಿದ್ದವರೇನು? ಹಾಗಿದ್ದರೆ ನಿನಗೆ ರಾಮಮಂತ್ರವೇ ಸೂಕ್ತ. ನೋಡು, ರಾಮ ಮತ್ತು ಶಕ್ತಿ ಇವೆರಡೂ ಬೇರೆಬೇರೆಯಲ್ಲ, ಒಂದೇ. ಆದ್ದರಿಂದ ನೀನು ರಾಮ ಮಂತ್ರವನ್ನೇ ತೆಗೆದುಕೊ; ಸಂಕೋಚಪಡಬೇಡ'' ಎಂದು ಹೇಳಿ ರಾಮಮಂತ್ರವನ್ನೇ ಉಪದೇಶ ಮಾಡಿದರು. ಆತ ಮನಗೆ ಹೋಗಿ ವಿಚಾರಿಸಿ ನೋಡಿದಾಗ ತಿಳಿದುಬಂತು, ತನ್ನ ವಂಶದವರೆಲ್ಲ ರಾಮ ಮಂತ್ರೋಪಾಸಕರೇ ನಿಜ ಎಂದು.

ಅನೇಕ ಭಕ್ತರಿಗೆ ಕನಸಿನಲ್ಲಿಯೇ ಶ್ರೀಮಾತೆಯವರಿಂದ ಮಂತ್ರವನ್ನು ಪಡೆದ ಅನುಭವವಾಗುತ್ತಿತ್ತು. ಪೂರ್ವಜನ್ಮದ ಪುಣ್ಯದಿಂದಲೋ ಅಥವಾ ಅವರವರ ಸತ್ಸಂಸ್ಕಾರದಿಂದಲೋ ಈ ರೀತಿ ಮಂತ್ರಲಾಭವಾಗುವುದುಂಟು. ಸಾಮಾನ್ಯವಾಗಿ ಹೀಗೆ ಸ್ವಪ್ನದಲ್ಲಿ ಮಂತ್ರದೀಕ್ಷೆ ದೊರೆತವರು ಶ್ರೀಮಾತೆಯವರ ಬಳಿಗೆ ಬಂದು ತಮ್ಮ ಅನುಭವವನ್ನು ಹೇಳಿಕೊಂಡು ಅವರಿಂದ ಬೇರೆ ಬೇರೆ ಸಲಹೆ-ಸೂಚನೆಗಳನ್ನು ಪಡೆಯುತ್ತಿದ್ದರು. ಒಮ್ಮೆ ಅಂತಹ ಒಬ್ಬ ಭಕ್ತ ಬಂದು ತನ್ನ ಸ್ವಪ್ನದ ಅನುಭವವನ್ನು ಹೇಳಿಕೊಂಡಾಗ ಶ್ರೀಮಾತೆ ಸ್ವಲ್ಪ ಹೊತ್ತು ಧ್ಯಾನಸ್ಥರಾಗಿ ಬಳಿಕ ಅವನಿಗೆ ಆ ಮಂತ್ರದ ಅರ್ಥವನ್ನು ವಿವರಿಸಿದರು. ಆಮೇಲೆ ಅವನಿಗೆ ತಾವಾಗಿಯೇ ಇನ್ನೊಂದು ಮಂತ್ರವನ್ನು ಕೂಡ ಉಪದೇಶ ಮಾಡಿ, ''ಮೊದಲು ನಿನ್ನ ಸ್ವಪ್ನಮಂತ್ರವನ್ನು ಜಪಿಸು. ಬಳಿಕ ನಾನು ಕೊಟ್ಟ ಮಂತ್ರದ ಜಪಮಾಡಿ ಧ್ಯಾನ ಮಾಡು'' ಎಂದು ಆದೇಶಿಸಿದರು. ಸ್ವಪ್ನದಲ್ಲಿ ದೀಕ್ಷೆ ಪಡೆದ ಇನ್ನೊಬ್ಬ ಭಕ್ತೆ ಬಂದು ಆ

ಮಂತ್ರವನ್ನು ಶ್ರೀಮಾತೆಯ ಮುಂದೆ ಉಚ್ಚರಿಸಿದಳು. ಅದನ್ನು ಕೇಳಿ ಅವರು, ''ಹೌದು; ಅದೇ ನಿನ್ನ ಮಂತ್ರ. ಬಹಳ ಒಳ್ಳೆಯದು. ನೀನು ಭಾಗ್ಯವಂತೆಯೇ ಸರಿ'' ಎಂದು ಶ್ಲಾಘಿಸಿದರು. ಆಕೆಗೆ ಬೇರಾವ ಮಂತ್ರವನ್ನೂ ಕೊಡದೆ ಅದೇ ಮಂತ್ರವನ್ನು ಜಪಿಸಲು ಹೇಳಿದರು.

ಶ್ರೀಮಾತೆಯವರು ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಸಂಸ್ಕಾರ ಸ್ವಭಾವ, ಅಭಿರುಚಿಗಳಿಗೆ ಅನುಗುಣವಾಗಿ ಒಂದು ನಿರ್ದಿಷ್ಟ ಮಂತ್ರವನ್ನು ಕಂಡುಕೊಂಡು ಅದನ್ನೇ ಉಪದೇಶಿಸುತ್ತಿದ್ದರು. ಅವರ ಈ ಅದ್ಭುತ ಸಾಮರ್ಥ್ಯಕ್ಕೆ ನಿದರ್ಶನವಾಗಿ ಈ ಘಟನೆಯನ್ನು ನೋಡೋಣ. ಒಮ್ಮೆ ಕುಲೀನ ಮನೆತನದ ಒಬ್ಬಾಕೆ ತನ್ನ ಮದುವೆಯಾದ ಹೊಸತರಲ್ಲಿ ಅವರಿಂದ ಮಂತ್ರದೀಕ್ಷೆ ಪಡೆದುಕೊಂಡು ಮಾವನ ಮನೆಗೆ ಹೊರಟುಹೋದಳು. ಅಲ್ಲಿ ಅವಳು ಸುಮಾರು ಎರಡು ವರ್ಷ ಆ ಮಂತ್ರವನ್ನು ಯಥಾಸಾಂಗವಾಗಿ ಜಪವನ್ನೇನೋ ಮಾಡುತ್ತ ಬಂದಳು. ಆದರೆ, ತಾನು ಮಂತ್ರವನ್ನು ಸರಿಯಾಗಿ ಗ್ರಹಿಸಿ ನೆನಪಿಟ್ಟುಕೊಂಡಿದ್ದೇನೋ ಇಲ್ಲವೋ ಎಂಬ ಸಂಶಯ ಅವಳನ್ನು ಕೊರೆಯುತ್ತಲೇ ಇತ್ತು. ಒಮ್ಮೆ ಶ್ರೀಮಾತೆಯವರ ಬಳಿಗೆ ಬಂದಿದ್ದಾಗ ಅವಳು ತನ್ನ ತೊಂದರೆಯನ್ನು ಅವರೆದುರು ತೋಡಿಕೊಂಡಳು. ಈಗ ತಾನು ಆ ಮಂತ್ರವನ್ನು ಹೇಗೆ ನೆನಪಿಟ್ಟುಕೊಂಡಿದ್ದೇನೆ, ಹೇಗೆ ಉಚ್ಚರಿಸುತ್ತಿದ್ದೇನೆ ಎಂದು ಅವಳು ತಿಳಿಸುವ ಮೊದಲೇ ಶ್ರೀಮಾತೆಯವರು, ''ಓ, ದೀಕ್ಷೆ ಕೊಟ್ಟು ಬಹಳ ಕಾಲವಾಯಿತಲ್ಲಮ್ಮ; ಈಗ ನನಗದು ನೆನಪಿರಲು ಸಾಧ್ಯವೆ? ಆಗಲಿ, ಸ್ವಲ್ಪ ತಾಳು, ನೀನೇನೂ ಆ ಮಂತ್ರವನ್ನು ಹೇಳಬೇಕಾಗಿಲ್ಲ. ನಾನು ಶ್ರೀರಾಮಕೃಷ್ಣರನ್ನು ಕೇಳಿಬರುತ್ತೇನೆ.'' ಎಂದು ದೇವರ ಕೋಣೆಗೆ ಹೋದರು. ಸ್ವಲ್ಪ ಹೊತ್ತಿನ ಬಳಿಕ ಹಿಂದಿರುಗಿ ಬಂದು, ''ಏನಮ್ಮ, ನಿನಗೆ ನಾನು ಕೊಟ್ಟದ್ದು ಈ ಮಂತ್ರ ಅಲ್ಲವೆ?'' ಎಂದು ಆ ಮಂತ್ರವನ್ನು ಉಚ್ಚರಿಸಿದರು. ''ಹ್ಞಾ, ಹೌದು, ಅದೇ ನೀವಿತ್ತಿದ್ದ ಮಂತ್ರ!'' ಎಂದಳು ಆಕೆ. ಆಗ ಅವರು ''ಹಾಗಾದರೆ ಅದನ್ನೇ ಜಪ ಮಾಡು. ಅದರಲ್ಲೇನೂ ತಪ್ಪಿಲ್ಲ'' ಎಂದು ತಿಳಿಸಿದರು.

### ದೇವಿಯಾಗಿ ಶ್ರೀಮಾತೆ ಶಾರದಾದೇವಿಯವರು

ಬಂಗಾಳದಿಂದ ಬಹಳ ದೂರದಲ್ಲಿರುವ ಶಿಲ್ಲಾಂಗಿನಲ್ಲಿ ಒಬ್ಬ ಭಕ್ತ ಶ್ರೀಮಾತೆಯ ವಿಚಾರವಾಗಿ ಬಹಳಷ್ಟು ತಿಳಿದಿದ್ದ. ಅವರು ದೇವಿ, ಸಾಕ್ಷಾತ್ ಜಗಜ್ಜನನಿ ಎಂಬ ಮಾತನ್ನೂ ಕೇಳಿದ್ದ. ಹೋಗಿ ಅವರನ್ನು ಕಾಣಬೇಕೆಂಬ ಇಚ್ಛೆ ಅವನಿಗಿತ್ತು. ಆದರೆ ಅವನಿಗೊಂದು ಸಂಶಯ – ಈ ಮಾತುಗಳಲ್ಲಿ ಸತ್ಯವೆಷ್ಟೊ ಉತ್ಪ್ರೇಕ್ಷೆಯೆಷ್ಟೋ? ಅವರು ನಿಜವಾಗಿಯೇ ದೇವಿಯೇ ಹೌದೋ ಅಥವಾ ಈ ಜನರೆಲ್ಲ ಅವರನ್ನು ದೇವಿಯ ಸ್ಥಾನಕ್ಕೆ ಏರಿಸಿದ್ದಾರೋ? ಎಂದು. ಇಷ್ಟು ದೂರದ ಊರಿನಿಂದ ಆ ಜಯರಾಂಬಾಟಿಯ ಹಳ್ಳಿಯ ಮೂಲೆಗೆ ಹೋಗಿ ಕೊನೆಗೂ ಅವರೊಬ್ಬರು ಸಾಮಾನ್ಯ ಹೆಂಗಸು ಎಂದು ಕಂಡು ಬಂದರೆ, ತಾನು ಅಷ್ಟೊಂದು ಆಸೆ ಹೊತ್ತು ಕಷ್ಟಪಟ್ಟುಕೊಂಡು ಹೋದದ್ದೆಲ್ಲ ವ್ಯರ್ಥವಾಗಿಬಿಡುತ್ತದಲ್ಲ ಎಂದು ಅವನ ಚಿಂತೆ. ಆದ್ದರಿಂದ ಅವನು ಮನಸ್ಸಿನಲ್ಲೇ ಆಲೋಚಿಸಿದ : ನೋಡೋಣ; ಶ್ರೀಮಾತೆಯವರು ಸ್ವಯಂ ದೇವಿಯೇ ಹೌದಾದಲ್ಲಿ ನನಗೆ ನನ್ನ ಕನಸಿನಲ್ಲಿ ಬಂದು ಏಳು ಸಲ ದರ್ಶನ ಕೊಡಲಿ. ಹಾಗಿದ್ದರೆ ಮಾತ್ರ ನಾನು ಅವರ ದೈವತ್ವವನ್ನು ಒಪ್ಪಿಕೊಳ್ಳುತ್ತೇನೆ, ಜಯರಾಂಬಾಟಿಗೆ ಹೋಗುತ್ತೇನೆ; ಇಲ್ಲದಿದ್ದರೆ ಇಲ್ಲ ಎಂದು. ಅವನು ನಿಜವಾದ ಶ್ರದ್ಧಾವಂತನೆಂದು ಕಾಣುತ್ತದೆ. ಶ್ರೀಮಾತೆ ಕೃಪೆಮಾಡಿ ಅವನಿಗೆ ಸ್ವಪ್ನದಲ್ಲಿ ಏಳು ಸಲ ದರ್ಶನ ಕೊಟ್ಟರು! ಅವನ ಶಂಕೆ ದೂರವಾಯಿತು. ಜಯರಾಂಬಾಟಿಗೆ ಬಂದು ಮಂತ್ರದೀಕ್ಷೆ ಪಡೆದು ಕೃತಾರ್ಥನಾದ.

ಒಮ್ಮೆ ಸುಮತಿ ಎಂಬಾಕೆಗೆ ತಾನು ಶ್ರೀಮಾತೆಯವರಿಗೆ ಕೆಂಪಂಚಿನ ಸೀರೆಯನ್ನಿತ್ತು ಅವರನ್ನು ಸಾಕ್ಷಾತ್ ಚಂಡಿಕಾ ದೇವಿಯ ರೂಪದಲ್ಲಿ ಪೂಜಿಸುತ್ತಿರುವಂತೆ ಕನಸಾಯಿತು. ಅದರ ಪ್ರಭಾವದಿಂದ ಅವಳು ನಿಜಕ್ಕೂ ಒಂದು ಕೆಂಪು ಅಂಚಿನ ಸೀರೆಯನ್ನು ತೆಗೆದುಕೊಂಡು ತಾನೇ ಅವಳಿಗೆ ತಿಳಿಸಲು ಸಂಕೋಚಪಟ್ಟು, ಬೇರೆಯವರ ಮೂಲಕ ತಿಳಿಸಿದಳು. ಕೂಡಲೇ ಶ್ರೀಮಾತೆ ಅವಳನ್ನು ಕರೆದು, ''ಏನಮ್ಮ, ನಿನಗೆ ಸಾಕ್ಷಾತ್ ಜಗನ್ಮಾತೆಯೇ ಸ್ವಪ್ನದರ್ಶನ ಕೊಟ್ಟಿದ್ದಾಳಲ್ಲವೆ? ಆ ಸೀರೆಯನ್ನು ಇಲ್ಲಿ ಕೊಡು. ಅದನ್ನು ನಾನೀಗ ಉಟ್ಟು ಕೊಳ್ಳಬೇಕಲ್ಲವೆ?'' ಎನ್ನುತ್ತ ಅದನ್ನು ಸ್ವೀಕರಿಸಿ ಉಟ್ಟುಕೊಂಡರು.

ಶ್ರಾವಣಮಾಸದ ಒಂದು ದಿನ ನೆರೆಗ್ರಾಮದ ಹಲದಿಪುಕುರದಿಂದ ಜಯರಾಂಬಾಟಿಯ ಮನೆಗೆ ಗೋಧಿ, ಅಕ್ಕಿ, ತರಕಾರಿ, ದಿನಸಿ, ಸೀಮೆಎಣ್ಣೆ ಇವನ್ನೆಲ್ಲ ತರಬೇಕಾಗಿತ್ತು. ಶ್ರೀಮಾತೆಯವರ ಆಜ್ಞಾನುಸಾರ ಸ್ವಾಮಿ ಮಹಾದೇವಾನಂದರು ಆ ಕೆಲಸಕ್ಕೆ ಹೊರಟರು. ಸಾಮಾನುಗಳನ್ನೆಲ್ಲ ಕೊಂಡುಕೊಂಡರು. ಆಮೇಲೆ ನೋಡಿದರೆ, ಅವುಗಳ ಒಟ್ಟು ತೂಕ ಮೂವತ್ತೈದು ಕೇಜಿಗಿಂತ ಹೆಚ್ಚಾಗಿಬಿಟ್ಟಿತು. ಈಗ ಅವನ್ನೆಲ್ಲ ನಾಲ್ಕಾರು ಮೈಲಿ ದೂರಕ್ಕೆ ಹೊತ್ತು ಸಾಗಿಸಬೇಕಾಗಿದೆ. ಆದರೆ ಯಾರಿಗೆ ತಾನೆ ಅಷ್ಟೊಂದು ಭಾರ ಹೊತ್ತು ನಡೆದು ಅಭ್ಯಾಸವಿರುತ್ತದೆ? ಮಹಾದೇವಾನಂದರು ಚಿಂತೆಗೆ ಸಿಲುಕಿದರು. ಹೋಗಲಿ, ಒಬ್ಬ ಕೂಲಿಯವನನ್ನು ಗೊತ್ತುಮಾಡಿಕೊಳ್ಳೋಣ ಎಂದರೆ ಶ್ರೀಮಾತೆಯವರು ಆ ವಿಷಯವಾಗಿ ಏನೂ ಹೇಳಿರಲಿಲ್ಲ. ಒಟ್ಟಿನಲ್ಲಿ ಒಂದು ಕಡೆಯಿಂದ ವಿಧೇಯತೆಯ ಪ್ರಶ್ನೆ. ಇನ್ನೊಂದು ಕಡೆಯಿಂದ ಖರ್ಚಿನ ಪ್ರಶ್ನೆ. ಏನು ಮಾಡುವುದೀಗ? ಕೊನೆಗೆ ಸ್ವಾಮಿಗಳು ನಿರ್ಧಾರ ಮಾಡಿದರು ''ಏನೇ ಆಗಲಿ, ಇದು ಶ್ರೀಮಾತೆಯವರ ಕಾರ್ಯ; ಆದ್ದರಿಂದ ನಾನೇ ಹೊತ್ತುಕೊಂಡು ಹೋಗುತ್ತೇನೆ'' ಎಂದು. ಈ ರೀತಿ ಸ್ಥಿರಸಂಕಲ್ಪ ಮಾಡಿ ಮೂಟೆಯನ್ನು ತಲೆಯ ಮೇಲಿಟ್ಟುಕೊಂಡು ಹೊರಟೇಬಿಟ್ಟರು. ಅಭ್ಯಾಸವಿಲ್ಲ, ಮಳೆಯಿಂದ ದಾರಿ ಬೇರೆ ಕೆಸರಿನಿಂದ ಜಾರುತ್ತಿದೆ. ಕಾಲುಗಳು ಅದುರಿದವು, ಕಷ್ಟವಾಯಿತು. ಅದರಲ್ಲೂ ಸ್ವಲ್ಪ ದೂರವಂತೂ ದುರ್ಗಮವಾಗಿತ್ತು. ಆದರೂ ಸೋಲಲೇಬಾರದೆಂಬ ದೃಢ ಮನಸ್ಸಿನಿಂದ ಅಡೆತಡೆಗಳನ್ನೆಲ್ಲ ಕ್ರಮಿಸಿ ಮುನ್ನಡೆದರು. ಆಶ್ಚರ್ಯ! ಈಗ ಇದ್ದಕ್ಕಿದ್ದಂತೆ ಹೊರೆ ಹಗುರವಾಗಿಬಿಟ್ಟಂ

ತೆನಿಸಿತು; ಭಾರದ ಅನುಭವವೇ ಇಲ್ಲ! ನಡಿಗೆ ಅತ್ಯಂತ ಸುಲಭ ವಾಗಿಬಿಟ್ಟಿತು! ''ಇದೇನಿದು? ಇದ್ದಕ್ಕಿದ್ದಂತೆ ಭಾರವೇ ಕಾಣ ದಂತಾಯಿತಲ್ಲ, ಇದು ಹೇಗಾಗಿರಬಹುದು?'' ಎಂದು ಆಶ್ಚರ್ಯ ಪಡುತ್ತಲೇ ಮಹಾದೇವಾನಂದರು ಜಯರಾಂಬಾಟಿಯನ್ನು ತಲುಪಿದರು. ಅದೇ ಆಲೋಚನೆಯಲ್ಲಿ ಮನೆಗೆ ಬಂದು ನೋಡು ತ್ತಾರೆ, ಶ್ರೀಮಾತೆಯವರು ತಮ್ಮ ಕೋಣೆಯ ಎದುರಿನ ಜಗ ಲಿಯ ಮೇಲೆ ಒಂದೇ ಸಮನೆ ಅತ್ತಿಂದಿತ್ತ ರಭಸದಿಂದ ಓಡಾಡು ತ್ತಿದ್ದಾರೆ! ಮುಖ ಕೆಂಪಾಗಿಬಿಟ್ಟಿದೆ, ಕಣ್ಣುಗಳು ಮೇಲೇರಿಕೊಂಡಿವೆ. ಬಾಹ್ಯಪ್ರಜ್ಞೆಯೇ ಇಲ್ಲದವರಂತೆ ''ನಾನು ಅವನಿಗೆ ಒಬ್ಬ ಕೂಲಿ ಯವನನ್ನು ನೇಮಿಸಿಕೊ ಅಂತ ಯಾಕಾದರೂ ಹೇಳಲಿಲ್ಲ!'' ಎಂದು ಮತ್ತೆಮತ್ತೆ ತಮ್ಮಷ್ಟಕ್ಕೇ ಮಾತಾಡಿಕೊಳ್ಳುತ್ತಿದ್ದಾರೆ. ಈಗ ಹೊರೆಯನ್ನಿಳಿಸಿ ನಿಂತ ಮಹಾದೇವಾನಂದರನ್ನು ಕಾಣುತ್ತಿದ್ದಂ ತೆಯೇ ಅವರು, ''ಏನಪ್ಪ, ಒಬ್ಬ ಕೂಲಿಯವನನ್ನು ಗೊತ್ತು ಮಾಡಿಕೊಳ್ಳಬಾರದಾಗಿತ್ತೆ? ನಾನೇನೋ ಹೇಳಿರಲಿಲ್ಲ ನಿಜ. ಆದ ರೇನಾಯಿತು? ನೀನು ಹೀಗೆ ಮಾಡಿಬಿಟ್ಟೆಯಲ್ಲ!'' ಎಂದು ನೊಂದು ನುಡಿದರು. ತಮ್ಮ ಮಕ್ಕಳ ಬಗ್ಗೆ ಶ್ರೀಮಾತೆಯವರ ಕಳಕಳಿ–ವಾತ್ಸಲ್ಯಗಳನ್ನು ಕಂಡು ಆ ಸ್ವಾಮಿಗಳು ಸಂತೋಷ ಪಡಬೇಕೇ, ಅಥವಾ ಇಚ್ಛಾಮಾತ್ರದಿಂದ ತಮ್ಮ ಹೊರೆಯನ್ನು ಹಗುರಗೊಳಿಸಿದ ಅವರ ಮಹಿಮೆಯನ್ನು ಕಂಡು ಆಶ್ಚರ್ಯ ಪಡಬೇಕೆ?

ಒಮ್ಮೆ ಸುರೇಂದ್ರನಾಥ ಸೇನ ಎಂಬುವನು ಸ್ವಾಮೀಜಿಯವ ರನ್ನು ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿದ. ಸ್ವಾಮೀಜಿ ಅದಕ್ಕೆ ಸಮ್ಮ ತಿಸಿ, ಆತನಿಗೆ ದೀಕ್ಷೆಯನ್ನು ಕೊಡಲು ಸಿದ್ಧರಾಗಿ, ಆಸನದ ಮೇಲೆ ಕುಳಿತುಕೊಂಡರು. ಆದರೆ ಹಾಗೆ ಕುಳಿತವರು, ಆಮೇಲೆ ಅವ ನಿಗೆ ಮಂತ್ರ ದೀಕ್ಷೆ ಕೊಡಲು ನಿರಾಕರಿಸಿಬಿಟ್ಟರು. ಅದಕ್ಕೆ ಅವರಿತ್ತ ಕಾರಣ ಬಹಳ ಆಶ್ಚರ್ಯಕರವಾದದ್ದು. ಅವರೆಂದು: ''ನೋಡು, ನನಗೆ ಶ್ರೀರಾಮಕೃಷ್ಣರಿಂದಲೇ ತಿಳಿದುಬಂದಿದೆ, ನಿನಗೆ ನನ ಗಿಂತಲೂ ಹೆಚ್ಚು ಶಕ್ತಿಶಾಲಿಯಾದ ವ್ಯಕ್ತಿಯೊಬ್ಬರಿಂದ ಮಂತ್ರ ದೀಕ್ಷೆ ಸಿಗುತ್ತದೆ ಅಂತ. ಆದ್ದರಿಂದ ನಾನೀಗ ನಿನಗೆ ಮಂತ್ರದೀಕ್ಷೆ ಕೊಡುವ ಹಾಗಿಲ್ಲ'' ಎಂದು. ಇದಾದ ಕೆಲವೇ ದಿನಗಳಲ್ಲಿ ಸುರೇಂದ್ರನಿಗೊಂದು ಸ್ವಪ್ನವಾಯಿತು. ಆ ಸ್ವಪ್ನದಲ್ಲಿ, ತಾನು ಶ್ರೀರಾಮಕೃಷ್ಣರ ತೊಡೆಯ ಮೇಲೆ ಕುಳಿತಿರುವಂತೆ ಮತ್ತು ಮಾತೃರೂಪಿಣಿಯಾದ ಒಬ್ಬಳು ದಿವ್ಯ ಸ್ತ್ರೀ ತನಗೆ ಮಂತ್ರದೀಕ್ಷೆ ಕೊಡುತ್ತಿರುವಂತೆ ಅವನು ಕಂಡ. ತಾನು ಪಡೆದ ಮಂತ್ರವೂ ಅವನ ನೆನಪಿನಲ್ಲಿ ಉಳಿದುಕೊಂಡಿತು. ಆದರೆ ಇದು ಎಷ್ಟರ ಮಟ್ಟಿಗೆ ಸತ್ಯವೋ, ಅವನಿಗೆ ತಿಳಿಯಲಿಲ್ಲ. ಆದರೂ ಅವನು ಆ ಕನಸಿನ ವಿಷಯವನ್ನು ಗುಪ್ತವಾಗಿಯೇ ಇಟ್ಟಿದ್ದ. ಹೀಗೆ ಹತ್ತಾರು ವರ್ಷಗಳೇ ಉರುಳಿದವು. ಮುಂದೆ ೧೯೧೧ರಲ್ಲಿ ದುರ್ಗಾಪೂಜೆ ಗಾಗಿ ಆತ ಜಯರಾಂಬಾಟಿಗೆ ಬಂದಾಗ ಶ್ರೀಮಾತೆಯವರು ಅವನ ಪ್ರಾರ್ಥನೆಯನ್ನು ಮನ್ನಿಸಿ ಮಂತ್ರದೀಕ್ಷೆಯನ್ನಿತ್ತರು. ಅವರು ತನಗಿತ್ತ ಮಂತ್ರವನ್ನು ಕೇಳಿದಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಏಕೆಂದರೆ ಅವನು ಅಂದು ಕನಸಿನಲ್ಲಿ ಪಡೆದ ಮಂತ್ರವೂ ಈ ಮಂತ್ರವೂ ಒಂದೇ ಆಗಿತ್ತು! ಇದಕ್ಕೂ ಹೆಚ್ಚಾಗಿ, ಅವನು ಕನಸಿನಲ್ಲಿ ಕಂಡ ಆ ದೈವೀ ಸ್ತ್ರೀಮೂರ್ತಿಯೂ ಶ್ರೀಮಾತೆ ಯವರೂ ಒಂದೇ ತೆರನಾಗಿ ಕಾಣುತ್ತಿದ್ದರು!

ಪ್ರೊ. ಗೋಕುಲದಾಸ ಅವರು ವಿಸ್ಮಯಕರ ಘಟನೆಯನ್ನು 'ಉದ್ಬೋಧನ' ಮಾಸಪತ್ರಿಕೆಯಲ್ಲಿ ಬರೆಯುತ್ತಾರೆ: ''ನಾನು ಶ್ರೀಮಾತೆಯವರ ಸಂಪರ್ಕದಲ್ಲಿದ್ದ ಕೆಲವು ವರ್ಷಗಳಲ್ಲಿ ಅವರು ಒಂದು ಸಲವೂ ಕೂಡ ನಿನ್ನ ಮನೆ ಎಲ್ಲಿ? ನೀನು ಯಾವ ಕೆಲಸ ಮಾಡುತ್ತಿದ್ದೀಯ? ನಿನಗೆ ಎಷ್ಟು ಜನ ಸೋದರರು? ನಿನ್ನ ತಾಯ್ತಂದೆಯರ ಹೆಸರೇನು? ಎಂದೇನೂ ಕೇಳಿರಲಿಲ್ಲ. ಆದರೆ ಒಂದು ದಿನ ನಾನು ಅವರಿಗೆ ಪ್ರಣಾಮ ಮಾಡಲು ಹೋದಾಗ ಅವರು ನನ್ನ ಅಣ್ಣಂದಿರಿಬ್ಬರ ಹೆಸರನ್ನು ಹೇಳಿ, ಅವರು ಹೇಗಿ ದ್ದಾರೆ ಎಂದು ಕೇಳಿದರು. ಅದನ್ನು ಕೇಳಿ, ಅರೆ! ನನ್ನ ಅಣ್ಣಂದಿರ ಹೆಸರು ಇವರಿಗೆ ಹೇಗೆ ತಿಳಿಯಿತು? ಎಂದು ನನಗೆ ತುಂಬ ವಿಸ್ಮಯವಾಯಿತು. ಆದರೆ ಅವರು ಒಬ್ಬ ಅಣ್ಣನ ಹೆಸರನ್ನು ಲಲಿತ ಎಂದು ಹೇಳುವುದರ ಬದಲು ನಲಿನ ಎಂದು ಹೇಳಿದರು. ಇದು ಅವರ ಉಚ್ಚಾರಣೆಯ ದೋಷವಿರಬಹುದು ಎಂದು ಕೊಂಡು ನಾನು ಮುಗುಳ್ನಕ್ಕೆ. ಆದರೆ ನಾನು ಮನೆಗೆ ಬಂದ ಮೇಲೆ ನನ್ನ ತಾಯಿಗೆ ಈ ವಿಷಯ ತಿಳಿಸಿದಾಗ ಅವಳು ''ಶ್ರೀಮಾತೆಯವರು ಹೇಳಿದ್ದೇ ಸರಿ. ಬಾಲ್ಯದಲ್ಲಿ ಆತನಿಗೆ ನಲಿನ ಎಂದೇ ಹೆಸರಿತ್ತು. ಅವನು ದೊಡ್ಡವನಾದ ಮೇಲೆ ಲಲಿತ ಎಂದು ಹೆಸರು ಬದಲಾಯಿತು'' ಎಂದು ಹೇಳಿದಳು.''

## ಉಪಸಂಹಾರ

ಶ್ರೀಮಾತೆಯವರ ದೇಹತ್ಯಾಗವಾದ ಬಳಿಕ, ಅಲ್ಲಿಗೆ ಬಂದ ಭಕ್ತರನ್ನುದ್ದೇಶಿಸಿ ಸ್ವಾಮಿ ಶಿವಾನಂದರು ಹೇಳಿದ ಮಾತು ಮನನ ಯೋಗ್ಯವಾಗಿದೆ. ''ಶ್ರೀಮಾತೆ ಈಗ ಸರ್ವವನ್ನೂ ವ್ಯಾಪಿಸಿ ಕೊಂಡಿದ್ದಾರೆ. ಸಮಸ್ತ ಅಸ್ತಿತ್ವದಲ್ಲೂ ಒಂದಾಗಿದ್ದಾರೆ. ಅವರನ್ನು ಈಗ ಎಲ್ಲೆಡೆಯೂ ಕಾಣಬಹುದು. ಯಾರೇ ಆಗಲಿ, ಒಂದೇ ಮನಸ್ಸಿನಿಂದ ಅವರನ್ನು ಕರೆದರೆ ಅವರು ಖಂಡಿತ ದರ್ಶನ ನೀಡುತ್ತಾರೆ. ಇಷ್ಟು ದಿನ ತಾಯಿಯ ಅಸ್ತಿತ್ವ ಒಂದೇ ಸ್ಥಳಕ್ಕೆ ಸೀಮಿತಗೊಂಡಿತ್ತು. ಆದರೆ ಈಗ ಅವರು ಎಲ್ಲೆಲ್ಲಿಯೂ ಇದ್ದಾರೆ. ವ್ಯಾಕುಲಚಿತ್ತರಾಗಿ ಹೃದಯಾಂತರಾಳದಿಂದ ಅವ ರನ್ನು ಕರೆಯುವುದೇ ತಡ, ಆಕೆ ದರ್ಶನ ಕೊಟ್ಟೇ ಕೊಡುತ್ತಾರೆ!''

ಸ್ವಾಮಿ ಶಿವಾನಂದರ ಈ ವಾಣಿಯು ಶ್ರೀಮಾತೆ ಶಾರದಾ ದೇವಿಯವರ ಇರುವಿಕೆಯಲ್ಲಿ ನಮಗೆ ಭರವಸೆಯನ್ನು ಉಂಟು ಮಾಡಲಿ. ಶ್ರೀಮಾತೆ ಶಾರದಾದೇವಿಯವರನ್ನು ಪ್ರೇಮಮಯಿ ಮಾತೆಯಾಗಿ, ಜ್ಞಾನಮಯಿ ಗುರುವಾಗಿ ಹಾಗೂ ಶಕ್ತಿಸ್ವರೂಪಿಣಿ ಜಗನ್ಮಾತೆಯಾಗಿ ಕಂಡು ಪ್ರೀತಿಸಿ, ಅನುಸರಿಸಿ, ಆರಾಧಿಸುವ ಜೀವನ ನಮ್ಮದಾಗಲಿ.

*ಆಕರ ಗ್ರಂಥ: 'ಶ್ರೀಶಾರದಾದೇವಿ ಜೀವನ ಗಂಗಾ', ಸ್ವಾಮಿ ಪುರುಷೋತ್ತಮಾನಂದ*